**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1067/2015**

| | | |
|---|---|---|
| ಸಾಕ್ಷಿದಾರರ ಹೆಸರು | **ಮಹೇಶ** | ಪ್ರಾಸಾಃ 03 |
| ತಂದೆಯ/ಗಂಡನ ಹೆಸರು | ಶಿವಣ್ಣ | ಚಾಸಾಃ 05 |
| ವಯಸ್ಸು | 36 ವರ್ಷ | |
| ಕೆಲಸ | ಸಹಾಯಕ ನಿರ್ದೇಶಕರು ಖಜಾನೆ ಇಲಾಖೆ | |
| ವಾಸ | ಗುಂಡ್ಲುಪೇಟೆ | ದಿಃ 19.07.2025 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ನಾನು 2013 ರಿಂದ 2017 ರವರೆಗೆ ಕವಲಂದೆ ಪೋಲಿಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 21.05.2015 ರಂದು ಮಧ್ಯಾಹ್ನ 3.00 ಗಂಟೆಗೆ ನಾನು ಠಾಣಾ ಕರ್ತವ್ಯದಲ್ಲಿರುವಾಗ ಬಾತ್ಮಿದಾರರಿಂದ ದೊಡ್ಡಕವಲಂದೆ ಗ್ರಾಮ ಪರಿಶಿಷ್ಟ ಜನಾಂಗ ಬೀದಿಯಲ್ಲಿ ನಾಗ @ ನಾಗರಾಜು ಎಂಬುವವರು ತಮ್ಮ ಮನೆಯ ಪಕ್ಕದಲ್ಲಿ ಅರಳೀಮರದ ಬಳಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆಂದು ಮಾಹಿತಿ ಬಂದ ಮೇರೆಗೆ ಚಾಸಾ 1 ರವರು ಹಾಗೂ ಚಾಸಾ 4 ರವರೊಂದಿಗೆ ನಾನು ಇಲಾಖಾ ವಾಹನ ಕೆ ಎ 55 ಜಿ 10 ರಲ್ಲಿ ಕೃತ್ಯ ಸ್ಥಳಕ್ಕೆ ಹೋಗಿರುತ್ತೇವೆ. ಆರೋಪಿ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ್ದು ನಾವು ಆತನನ್ನು ಹಿಡಿದುಕೊಂಡು ಸ್ಥಳವನ್ನು ಪರಿಶೀಲಿಸಿದಾಗ ಕೃತ್ಯ ಸ್ಥಳವಾದ ಆರೋಪಿಯ ಮನೆಯ ಪಕ್ಕದ ಶೆಡ್ ನಲ್ಲಿ ಇದ್ದ ಬಾಕ್ಸ್ ನಲ್ಲಿ 180 ಎಂ.ಎಲ್ ನ ಓಲ್ಡ್ ಟ್ರಾವಲಿನ್ ವಿಸ್ಕಿಯ 17 ಟೆಟ್ರಾ ಪ್ಯಾಕೇಟುಗಳು ಮತ್ತು 90 ಎಂ.ಎಲ್ ನ 65 ವಿಂಡ್ಸರ್ ವಿಸ್ಕಿ ಟೆಟ್ರಾ ಪ್ಯಾಕೆಟುಗಳು ದೊ ರೆತಿರುತ್ತದೆ ಸದರಿ ಬಾಕ್ಸ್ ಯಾವ ರೀತಿಯ ಬಾಕ್ಸ್ ಎಂದು ನನಗೆ ಗೊತ್ತಿಲ್ಲ. ಠಾಣೆಯಿಂದ ಬರುವಾಗ ಚಾಸಾ 1 ರವರು ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಕರೆದುಕೊಂಡು ಬಂದಿದ್ದು ಅವರ ಸಮಕ್ಷಮ

ಮಹಜರ್ ಕ್ರಮ ಜರುಗಿಸಿ ಮದ್ಯದ ಟೆಟ್ರಾ ಪ್ಯಾಕೇಟುಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ ಆರ್ ಎಂಬ ಅಕ್ಷರದಿಂದ ಅರಗಿನ ಸೀಲು ಮಾಡಿ ಅಮಾನತು ಪಡಿಸಿಕೊಳ್ಳಲಾಯಿತು. ಸದರಿ ಮಹಜರ್ ಅನ್ನು ಮಧ್ಯಾಹ್ನ 3.30 ಗಂಟೆಯಿಂದ 4.30 ಗಂಟೆಯ ವರೆಗೆ ತಯಾರಿಸಲಾಯಿತು. ಸದರಿ ಮಹಜರ್ ಗೆ ನಾನು ಸ್ಥಳದಲ್ಲೇ ಸಹಿ ಮಾಡಿರುತ್ತೇನೆ.

ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ. 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 1(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ 180 ಎಂ.ಎಲ್ ನ ಓಲ್ಡ್ ಟ್ರಾವಲಿನ್ ವಿಸ್ಕಿಯ 17 ಟೆಟ್ರಾ ಪ್ಯಾಕೇಟುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 01 ಎಂದು ಮತ್ತು 90 ಎಂ.ಎಲ್ ನ 65 ವಿಂಡ್ಸರ್ ವಿಸ್ಕಿ ಟೆಟ್ರಾ ಪ್ಯಾಕೆಟುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 02 ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ಆರೋಪಿ ಮದ್ಯವನ್ನು ಮನೆಯ ಮುಂದಿನ ಜಗುಗಲಿಯ ಮೇಲೆ ಮಾರಾಟ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮದ್ಯವನ್ನು ಪ್ಲಾಸ್ಟಿಕ್ ಕವರ್ ನಲ್ಲಿ ಮಾರಾಟ ಮಾಡುತ್ತಿದ್ದರು, ರಟೆಟನ ಬಾಕ್ಸ್ ಇರಲಿಲ್ಲ ಎಂದರೆ ಸರಿಯಲ್ಲ. ಓಲ್ಡ್ ಟವರಿನ್ ವಿಸ್ಕಿ 17 ಡಬ್ಬಾ ಆಗಿದ್ದು ಟೆಟ್ರಾ ಪ್ಯಾಕೇಟ್ ಅಲ್ಲ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಎಸ್.ಜಿ ವಕೀಲರಿಂದಃ</u>**

ಚಾಸಾ 1 ರವರಿಗೆ ಬಾತ್ಮಿದಾರರು ದೂರವಾಣಿ ಮೂಲಕ ಮಾಹಿತಿ ತಿಳಿಸಿರುತ್ತಾರೆ. ಪೊಲೀಸ್ ಠಾಣೆಯಿಂದ ಘಟನಾ ಸ್ಥಳ ಅಂದಾಜು 1.5 ಕಿ.ಮೀ ದೂರದಲ್ಲಿರುತ್ತದೆ. ಮದ್ಯ ತುಂಬಿದ್ದ ಪ್ಲಾಸ್ಟಿಕ್ ಚೀಲ ಯಾವ ಬಣ್ಣದ್ದು ಎಂದು ನನಗೆ ಗೊತ್ತಿಲ್ಲ. ಮುದ್ದೆಮಾಲು 1 ಮತ್ತು 2 ನ ಮೇಲೆ ಮಾಡಿರುವ ಅರಗಿನ ಸೀಲ್ ನಲ್ಲಿ ಆರ್. ಎಂಬ ಅಕ್ಷರ ಕಾಣಿಸುತ್ತಿಲ್ಲ ಎಂದರೆ ಸರಿ. ಮುದ್ದೆಮಾಲು 1 ಮತ್ತು 2 ರ ಮೇಲೆ ನನ್ನ ಸಹಿ ಇಲ್ಲ. ಮುದ್ದೆಮಾಲುಗಳನ್ನು ಬಿಳಿ ಬಟ್ಟೆಯಿಂದ ಕೃತ್ಯ ಸ್ಥಳದಲ್ಲೇ ಸುತ್ತಿ ದಾರದಿಂದ ಕಟ್ಟಿರುತ್ತೇವೆ. ಸಾಕ್ಷಿದಾರರ ಸಹಿ ಉಳ್ಳ ಚೀಟಿಯನ್ನು ಪೊಲೀಸ್ ಠಾಣೆಯಲ್ಲಿಯೇ ತಯಾರಿಸಿದ್ದು, ಕೃತ್ಯ ಸ್ಥಳದಲ್ಲೇ ಮುದ್ದೆಮಾಲುಗಳ ಮೇಲೆ ಅಂಟಿಸಲಾಗಿದೆ. ಸದರಿ ದಿನಾ ನಾನು ಚಾಸಾ 1 ರವರೊಂದಿಗೆ ದಾಳಿಗೆ ಸಹಕರಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಮುದ್ದೆಮಾಲುಗಳಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮೇಲಧಿಕಾರಿಗಳ ಸೂಚನೆಯ ಮೇರೆಗೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**